# ಗ್ಲ್ಯಾಮರ್ ಗೊಂಬೆಯ ಸಿನಿಮಾ ಗ್ರಾಮರ್



'ಮೊಗ್ಗಿನ ಮನಸ್ಸು' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಿತರಾದ ಶುಭಾ ಪೂಂಜಾ ಗ್ಲ್ಯಾಮರಸ್ ಪಾತ್ರಗಳಿಂದ ಗಮನಸೆಳೆದವರು. ತಮ್ಮ ಚಿತ್ರ ಬದುಕಿನ ಕುರಿತು ಅವರು 'ಸುಧಾ' ಜೊತೆ ಮಾತನಾಡಿದ್ದಾರೆ.

■ ಪದ್ಮನಾಭ ಭಟ್

◆ **ಕನ್ನಡ ಚಿತ್ರರಂಗಕ್ಕೆ ಬಂದು 12 ವರ್ಷ ಕಳೆದುಹೋಯ್ತು. ಈ ಪ್ರಯಾಣ ಹೇಗಿತ್ತು?**

ಇಷ್ಟು ವರ್ಷಗಳಲ್ಲಿ ನಾನು ಸೋಲನ್ನು ನೋಡಿದ್ದೀನಿ, ಗೆಲುವನ್ನೂ ನೋಡಿದ್ದೀನಿ... ಸಂತೋಷ ಕಂಡಿದ್ದೀನಿ, ಅವಮಾನ ಅನುಭವಿಸಿದ್ದೀನಿ. ಸೆಲೆಬ್ರಿಟಿ ಆಗಿ ಗುರ್ತಿಸಿಕೊಂಡಿದ್ದೀನಿ, ವಿವಾದಗಳನ್ನೂ ಎದುರಿಸಿದ್ದೀನಿ. ಇವೆಲ್ಲವನ್ನೂ ಹಾದು ಬಂದಿರುವುದರಿಂದಲೇ ಈಗ ಒಂದು ರೀತಿಯ ಪ್ರಬುದ್ಧತೆ ಬಂದಿದೆ. ಚಿತ್ರರಂಗದಲ್ಲಿ ಯಾವ ವಿಷಯವನ್ನು ಹೇಗೆ ನಿಭಾಯಿಸಬೇಕು, ಯಾವ ರೀತಿಯ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಈ ಎಲ್ಲ ನಿರ್ಧಾರಗಳನ್ನು ಒಂದಿಷ್ಟು ಯೋಚಿಸಿ ಕೈಗೊಳ್ಳುವಷ್ಟು ಜಾಣ್ಮೆ ಸಿಕ್ಕಿದೆ. ಕೊನೆಗೂ ಇಲ್ಲಿನ ಏರಿಳಿತಗಳು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಆದರೆ ನಮ್ಮ ಕೆಲಸವನ್ನು ನಾವು ಸರಿಯಾಗಿ ಮಾಡಬೇಕು.

ಮೊದಲೆಲ್ಲ ಸಣ್ಣ ವಿಷಯಗಳಿಗೂ ತಲೆ ಕೆಡಿಸಿಕೊಳ್ಳುತ್ತಿದ್ದೆ. ಈಗ ಯಾವುದಕ್ಕೂ ತಲೆಕೆಡಿಸಿಕೊಳ್ಳಲ್ಲ. ಎಂಥ ಪರಿಸ್ಥಿತಿಯೇ ಬಂದರೂ ನಿಭಾಯಿಸುವಷ್ಟು ಧೈರ್ಯ ಬಂದಿದೆ. ಇಲ್ಲಿ ಮುಳುಗಲೂ ಗೊತ್ತು; ಈಜಿ ದಡ ತಲುಪಲೂ ಗೊತ್ತು.

◆ **ಈ ಧೈರ್ಯ ಗಳಿಸಿಕೊಳ್ಳಲು ನೀವು ನಿಮ್ಮ ವೃತ್ತಿಬದುಕಿನ ಬಹುಮುಖ್ಯ ಘಟ್ಟವನ್ನು ಕಳೆದುಕೊಂಡಿದ್ದೀರಿ ಅನಿಸುವುದಿಲ್ಲವೇ?**

ಹೌದು. ಆದರೆ ಯಾವುದೋ ಒಂದನ್ನು ಗಳಿಸಿಕೊಳ್ಳಬೇಕು ಎಂದರೆ ಯಾವುದನ್ನೋ ಕಳೆದುಕೊಳ್ಳಲೇಬೇಕಲ್ಲವೇ? ನಮ್ಮ ತಪ್ಪುಗಳನ್ನು ನಾವು ತಿದ್ದಿಕೊಂಡು ಹೋಗುತ್ತಿರಬೇಕು. ಅದೇ ಜೀವನ. ನಾನು ಮಾಡುತ್ತಿರುವುದೂ ಅದೇ.

◆ **ನೀವು 'ಮೊಗ್ಗಿನ ಮನಸ್ಸು', 'ನರಗುಂದ ಬಂಡಾಯ' ಹೀಗೆ ಬೇರೆ ಬೇರೆ ರೀತಿಯ ಪಾತ್ರಗಳಲ್ಲಿಯೂ ನಟಿಸಿದ್ದೀರಾ. ನಿಮಗೆ ಗ್ಲ್ಯಾಮರಸ್ ಪಾತ್ರಗಳು, ದ್ವಂದ್ವಾರ್ಥದ ಸಂಭಾಷಣೆಯ ಸಿನಿಮಾಗಳ ಒಂದು ಇಮೇಜ್ ಅಂಟಿಕೊಂಡುಬಿಟ್ಟಿದೆಯಲ್ಲವೇ?**

ಹೌದು. ಆದರೆ ಹಾಗೆ ಹೇಳುವವರು ಒಂದನ್ನು ಅರ್ಥ ಮಾಡಿಕೊಳ್ಳುವುದಿಲ್ಲ; ನಾವು ನಟಿಯಾಗಿ ಎಲ್ಲ ರೀತಿಯ ಪಾತ್ರಗಳನ್ನೂ ಮಾಡುತ್ತೇವೆ. ಚಿತ್ರರಂಗದಲ್ಲಿ ಉಳಿದುಕೊಳ್ಳಬೇಕು ಎಂದರೆ ಆಯಾ ಸಮಯಕ್ಕೆ ಯಾವ ವಿಷಯ ಟ್ರೆಂಡಿಂಗ್‌ನಲ್ಲಿದೆಯೋ ಅದನ್ನು ಮಾಡಬೇಕಾಗುತ್ತದೆ. ಇಂಥ ಪಾತ್ರಗಳನ್ನಷ್ಟೇ ಮಾಡುತ್ತೇನೆ ಎಂದು ಚೌಕಟ್ಟು ಹಾಕಿಕೊಂಡರೆ ವರ್ಷಕ್ಕೆ ಒಂದು ಸಿನಿಮಾ ಮಾಡಬಹುದು. ಚಿತ್ರರಂಗದಲ್ಲಿ ಉಳಿದುಕೊಳ್ಳಲಾಗುವುದಿಲ್ಲ. ಕೆಲವು ಸಮಯದಲ್ಲಿ ದ್ವಂದ್ವಾರ್ಥ ಹೆಚ್ಚಾಗಿರುವ ಸಿನಿಮಾಗಳಲ್ಲಿ ನಟಿಸಿದ್ದು ನಿಜ. ಕೆಲವು ಚಿತ್ರಗಳ ಆಯ್ಕೆಯಲ್ಲಿ ನಾನು ಎಡವಿರುವುದೂ ನಿಜ. ಆದರೆ ಗ್ಲ್ಯಾಮರಸ್ ಪಾತ್ರಗಳಲ್ಲಿ ಕಾಣಿಸಿಕೊಳ್ಳುವುದು ತಪ್ಪು ಎಂದು ನನಗೆ ಅನಿಸುವುದಿಲ್ಲ. ಯಾಕೆಂದರೆ ಗ್ಲ್ಯಾಮರ್ ಇಲ್ಲದೆ ಸಿನಿಮಾವೇ ಇಲ್ಲ. ಅಲ್ಲದೆ ಒಂದು ವಯಸ್ಸಿನವರೆಗೆ ಮಾತ್ರ ಒಬ್ಬ ನಟಿ ಗ್ಲ್ಯಾಮರಸ್ ಪಾತ್ರಗಳನ್ನು ಮಾಡಲು ಸಾಧ್ಯ. ನಂತರ ಮಾಡಲಾಗುವುದಿಲ್ಲ. ಹಾಗಾಗಿ ಗ್ಲ್ಯಾಮರಸ್ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಕುರಿತು ನನಗೆ ಯಾವುದೇ ಪಶ್ಚಾತ್ತಾಪ ಇಲ್ಲ.

ಹಾಗೆಯೇ 'ನರಗುಂದ ಬಂಡಾಯ'ದಂಥ ಪಕ್ಕಾ ಡಿ–ಗ್ಲ್ಯಾಮರ್ ಚಿತ್ರಗಳನ್ನೂ ಮಾಡಿದ್ದೇನೆ. ಅಂಥ ಪಾತ್ರಗಳನ್ನು ಮುಂದೆಯೂ ಮಾಡುತ್ತಲೇ ಇರುತ್ತೇನೆ. ಯಾವುದೋ ಒಂದು ಡಿ–ಗ್ಲ್ಯಾಮರ್ ಚಿತ್ರ ಹಿಟ್ ಆಗಬಹುದು. ಆಗ ನನಗೆ ಆ ರೀತಿಯ ಪಾತ್ರಗಳು ಹೆಚ್ಚು ಸಿಗಬಹುದು.

◆ **ಸದ್ಯಕ್ಕೆ ಯಾವ ಸಿನಿಮಾಗಳಲ್ಲಿ ನಟಿಸುತ್ತಿದ್ದೀರಾ?**

ಈಗ 'ತ್ರಿದೇವಿ' ಎಂಬ ಸಿನಿಮಾ ಮಾಡುತ್ತಿದ್ದೇನೆ. ಈ ಚಿತ್ರದಲ್ಲಿ ಮೂವರು ನಾಯಕಿಯರು. ಮಲಯಾಳಂ ಮತ್ತು ಕನ್ನಡ ಭಾಷೆಗಳಲ್ಲಿ ತಯಾರಾಗುತ್ತಿರುವ ಇದು ಆ್ಯಕ್ಷನ್ ಪ್ರಧಾನ ಚಿತ್ರ. ಹಾಗೆಯೇ 'ರೈಮ್ಸ್' ಎಂಬ ಒಂದು ಚಿತ್ರದಲ್ಲಿ ಪತ್ರಕರ್ತೆಯ ಪಾತ್ರ ಮಾಡುತ್ತಿದ್ದೇನೆ. ಹಾಗೆಯೇ 'ಖಾಲಿ ದೋಸೆ ಕಲ್ಪನಾ' ಎಂಬ ಹಾಸ್ಯಪ್ರಧಾನ ಸಿನಿಮಾ ಮಾಡುತ್ತಿದ್ದೇನೆ.

◆ **ನಿರ್ಮಾಣ ಸಂಸ್ಥೆ ಆರಂಭಿಸುವ ಆಸೆಯೂ ಇದೆಯಂತೆ?**

ಹೌದು. ನನಗೆ ನಿರ್ಮಾಣ ಸಂಸ್ಥೆ ಆರಂಭಿಸುವ ಆಸೆ ಇದೆ. ಅದರಿಂದ ಸಿನಿಮಾ ಅಷ್ಟೇ ಅಲ್ಲ, ಟೀವಿ ಧಾರಾವಾಹಿಗಳು, ವೆಬ್ ಸೀರಿಯಲ್‌ಗಳು ಹೀಗೆ ಹಲವು ವೇದಿಕೆಗಳಿಗೆ ನಿರ್ಮಾಣ ಮಾಡುವ ಆಲೋಚನೆ ಇದೆ.



ಚಿತ್ರ: ಅಭಿಷೇಕ್ ಎಸ್.ಎನ್.